

# ಮಾಸದ ದಿವ್ಯಾ ನೆನಪು

ಚಂದಿರನಂಥ ಮುಖದ ನಟಿ ದಿವ್ಯಾ ಭಾರತಿಯ ಹೆಸರು ಈಗಿನ ತಲೆಮಾರಿನವರಿಗೆ ಗೊತ್ತೇ ಇರಲಿಕ್ಕಿಲ್ಲ. ಸಿನಿಮಾ ಆಸಕ್ತಿ ಇರುವ ಮಧ್ಯಮವಯಸ್ಕರಲ್ಲಿ ಈ ನಟಿಯ ನೆನಪು ಮಾಸಿರಲಾರದು. ದಿವ್ಯಾ ನಮ್ಮನ್ನೆಲ್ಲ ಚಿಕ್ಕ ವಯಸ್ಸಿಗೇ ಅಗಲಿದರು. ಏಪ್ರಿಲ್ 5ರಂದು ಅವರ ಅಗಲಿಕೆಗೆ 29 ವರ್ಷಗಳು ತುಂಬಿದವು.

ಈಗಲೂ ಹಿಂದಿ ಸಿನಿಮಾಗಳ ಮೇಲೆ ಸತತವಾಗಿ ಬಂಡವಾಳವನ್ನು ಹೂಡುತ್ತಾ, ಹೊಸ ಅಭಿರುಚಿಯ ಚಿತ್ರಗಳನ್ನು ನೀಡುತ್ತಿರುವ ನಿರ್ಮಾಪಕ ಸಾಜಿದ್ ನಾಡಿಯಾದ್‌ವಾಲಾ ಅವರು ದಿವ್ಯಾ ಪತಿಯಾಗಿದ್ದರೆನ್ನುವುದು ಅನೇಕರಿಗೆ ತಿಳಿದಿದೆ. ಈಗ ವಾರ್ದಾ ಖಾನ್ ಜತೆ ಸಾಜಿದ್ ಸಂಸಾರ ನಡೆಸುತ್ತಿದ್ದಾರೆ. ಇಬ್ಬರಿಗೂ ಎರಡು ಮಕ್ಕಳಿವೆ. ವಾರ್ದಾ ಈಗಲೂ ದಿವ್ಯಾ ಭಾರತಿ ಅವರನ್ನು ನೆನಪಿಸಿಕೊಳ್ಳುತ್ತಲೇ ಇರುತ್ತಾರೆ. ಇತ್ತೀಚೆಗೂ ಅವರು ತಮ್ಮ ನೆನಪನ್ನ ಹಂಚಿಕೊಂಡಿದ್ದರು.

ಸಾಜಿದ್ ಅವರನ್ನು ವಾರ್ದಾ ಮೊದಲು ಭೇಟಿ ಮಾಡಲು ಕಾರಣವೇ ದಿವ್ಯಾ ಭಾರತಿ. ಆ ನಟಿಯ ಸಂದರ್ಶನ ಮಾಡಲೆಂದು ಅವರು ಮನೆಗೆ ಬಂದಿದ್ದುದು. ಆಗ ದಿವ್ಯಾ ಅವರ ಪೋಷಕರನ್ನೂ ಅವರು ಪರಿಚಯ ಮಾಡಿಕೊಂಡಿದ್ದರು. ದಿವ್ಯಾ ಅಗಲಿದ ಮೇಲೆ ಮನೆಯವರೆಲ್ಲರಿಗೂ ವಾರ್ದಾ ಅವರಲ್ಲಿಯೂ ಅದೇ ಹುಡುಗಿಯ ಗುಣವಿದೆ ಎನ್ನಿಸಿತ್ತಂತೆ. ಸಾಜಿದ್ ಕೂಡ ಇಷ್ಟಪಟ್ಟು ವಾರ್ದಾ ಅವರನ್ನು ಜೀವನ ಸಂಗಾತಿಯನ್ನಾಗಿಸಿಕೊಂಡರು.

ದಿವ್ಯಾ ಭಾರತಿ ಅವರನ್ನು ಸಾಜಿದ್ ಎಷ್ಟರಮಟ್ಟಿಗೆ ಹಚ್ಚಿಕೊಂಡಿದ್ದರೆನ್ನುವುದು ವಾರ್ದಾ ಅವರಿಗೆ ಚೆನ್ನಾಗಿ ಗೊತ್ತಿದೆ. ಈಗಲೂ ಈ ನಟಿಯ ನೆನಪಾಗಿ ಒಂದು ಸುಗಂಧದ್ರವ್ಯದ ಶೀಶೆ ಹಾಗೂ ಕೆಲವು ಕಾಸ್ಮೆಟಿಕ್‌ಗಳು ಸಾಜಿದ್ ಸಂಗ್ರಹದಲ್ಲಿ ಜೋಪಾನವಾಗಿವೆ. ಆ ಸುಗಂಧದ್ರವ್ಯವನ್ನು ದಿವ್ಯಾ ಕೊನೆಯ ಬಾರಿ ಸ್ಪರ್ಶಿಸಿದ್ದರು ಎನ್ನುವ ಸಂಗತಿಯೂ ವಾರ್ದಾ ಅವರಿಗೆ ಗೊತ್ತು.

ಕೆಲವು ವರ್ಷಗಳ ಹಿಂದೆ ಸಾಮಾಜಿಕ ಜಾಲತಾಣದಲ್ಲಿ ವಾರ್ದಾ ತಮ್ಮ ಅನುಭವವನ್ನು ಪೋಸ್ಟ್ ಮಾಡಿದ್ದಾಗ, ಅನೇಕರು ಅವರನ್ನು ಟ್ರೋಲ್ ಮಾಡಿದ್ದರು. ಅದಕ್ಕೆ ತಲೆಕೆಡಿಸಿಕೊಳ್ಳದೆ ಸಮಾಧಾನದಿಂದ ತಮ್ಮ ಬದುಕಿನ ಭಾಗವಾಗಿ ದಿವ್ಯಾ ಭಾರತಿ ಅವರ ನೆನಪು ಈಗಲೂ ಇದೆ ಎಂದು ಅವರು ಪ್ರತಿಕ್ರಿಯಿಸಿದ್ದರು.

■ ವಿಶಾಖ ಎನ್

# ‘ಬೀಸ್ಟ್’ಗೆ ಶಾರುಖ್ ಶುಭಹಾರೈಕೆ

ಬಾಲಿವುಡ್ ಈಗ ದಕ್ಷಿಣ ಭಾರತದ ಚಿತ್ರಗಳನ್ನು ವಾರೆಗಣ್ಣಿನಿಂದ ನೋಡುವುದು ಬಹುತೇಕ ಇಲ್ಲವೇ ಇಲ್ಲ ಎನ್ನುವಂತಾಗಿದೆ. ‘ಆರ್‌ಆರ್‌ಆರ್’ ಸಿನಿಮಾ ಪ್ರಚಾರದ ಭಾಗವಾಗಿ ಬಿಗ್‌ಬಾಸ್ ಹಿಂದಿ ರಿಯಾಲಿಟಿ ಷೋಗೆ ಹೋಗಿದ್ದಾಗ ಜೂನಿಯರ್ ಎನ್‌ಟಿಆರ್ ಭಾರತದ ದೊಡ್ಡ ಆ್ಯಕ್ಷನ್ ಹೀರೊ ತಾವು ಎಂದು ಸಲ್ಮಾನ್ ಅವರನ್ನು ಮುಕ್ತಕಂಠದಿಂದ ಹೊಗಳಿದ್ದರು. ಅದಾದ ಮೇಲೆ ‘ಆರ್‌ಆರ್‌ಆರ್’ ತರಹದ ಸಿನಿಮಾಗಳನ್ನು ಹೀಗೆಲ್ಲ ದೊಡ್ಡ ಮಟ್ಟದಲ್ಲಿ ಸ್ವೀಕರಿಸುವ ದಕ್ಷಿಣ ಭಾರತದ ಪ್ರೇಕ್ಷಕರಿಗೆ ತಮ್ಮ ಸಿನಿಮಾಗಳೇಕೆ ಅಷ್ಟಾಗಿ ರುಚಿಸುವುದಿಲ್ಲ ಎಂಬ ಜಿಜ್ಞಾಸೆಯನ್ನು ಸಲ್ಮಾನ್ ವ್ಯಕ್ತಪಡಿಸಿದ್ದರು. ಈಗ ಶಾರುಖ್ ಖಾನ್ ತಮಿಳು ಚಿತ್ರರಂಗದ ಪ್ರತಿಭೆಗಳಿಗೆ ಪ್ರಚಾರಮುದ್ರೆ ಒತ್ತುವ ಮೂಲಕ ಸುದ್ದಿಯಲ್ಲಿದ್ದಾರೆ.

‘ಬೀಸ್ಟ್’ ತಮಿಳು ಸಿನಿಮಾದ ಟ್ರೇಲರ್ ಬಿಡುಗಡೆಯಾದ ಮೇಲೆ ಅದನ್ನು ನೋಡಿ ಶಾರುಖ್ ಖಾನ್ ಟ್ವೀಟ್ ಮಾಡಿದ್ದಾರೆ. ಕಳೆದ ವರ್ಷ ಅವರ ಪಕ್ಕದಲ್ಲಿ ತಮಿಳಿನ ನಿರ್ದೇಶಕ ಅಟ್ಲಿ ಕುಳಿತಿದ್ದರು. ಈ ವರ್ಷ ‘ಬೀಸ್ಟ್’ ಟ್ರೇಲರ್ ಅನ್ನೂ ಹಾಗೆಯೇ ಕುಳಿತು ನೋಡಿರುವ ಅವರು, ‘ಅಟ್ಲಿ ನನ್ನಂತೆಯೇ ನಟ ವಿಜಯ್ ಅಭಿಮಾನಿ. ಬೀಸ್ಟ್ ಸಿನಿಮಾಗೆ ಯಶಸ್ಸು ಸಲ್ಲಲಿ’ ಎಂದು ಟ್ವೀಟ್‌ನಲ್ಲಿ ಹಾರೈಸಿದ್ದಾರೆ. ಅದನ್ನು ಓದಿದ ಅಭಿಮಾನಿಗಳು ಶಾರುಖ್ ಅವರ ಹೃದಯವೈಶಾಲ್ಯವನ್ನು ಕೊಂಡಾಡಿದ್ದಾರೆ.

ಅಟ್ಲಿ ನಿರ್ದೇಶನದಲ್ಲಿ ‘ಲಯನ್’ ಎಂಬ ಸಿನಿಮಾದಲ್ಲಿ ಶಾರುಖ್ ಖಾನ್ ನಟಿಸಲಿದ್ದಾರೆ ಎಂಬ ಸುದ್ದಿ ಕಳೆದ ವರ್ಷ ರೆಕ್ಕೆಪುಕ್ಕ ಪಡೆದುಕೊಂಡಿತ್ತು. ಆದರೆ, ಈ ಕುರಿತು ಶಾರುಖ್ ಏನನ್ನೂ ಹೇಳಿಲ್ಲ.

ನೆಲ್ಸನ್ ನಿರ್ದೇಶನದ ‘ಬೀಸ್ಟ್’ ಚಿತ್ರದ ಕುರಿತು ಅಭಿಮಾನಿಗಳಲ್ಲಿ ನಿರೀಕ್ಷೆ ಮಡುಗಟ್ಟಿದೆ. ■




